# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 68/2024

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಸ್ವಾಮಿ ಅಲಿಯಾಸ್ ಭೋಜಪ್ಪ | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ/ಗಂಡನ ಹೆಸರು | ಃ ಶ್ರೀ ನಾಗಣ್ಣ | 27.03.2025 | |
| ವಯಸ್ಸು | ಃ 63 ವರ್ಷ | | |
| ವೃತ್ತಿ | ಃ ವ್ಯವಸಾಯ | ಪ್ರಾ.ಸಾ. | ಃ 17 |
| ವಾಸಸ್ಥಳ | ಃ ಪಿ.ಮರಹಳ್ಳಿ | ಚಾ.ಸಾ. | ಃ 19 |

<u>ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ</u>

. ಮೃತ ಪರಶಿವಪ್ಪನ ಪರಿಚಯ ಇದೆ. ಚಾ.ಸಾ–1 ಮಹದೇವಮ್ಮ ಇವರ ಪರಿಚಯ ಇದೆ. ಚಾ.ಸಾ–2 ರಿಂದ 6 ರವರ ಪರಿಚಯ ಇದೆ. ಕೋರ್ಟ್ ಮುಂದೆ ಇರುವ ಆರೋಪಿತರ ಪರಿಚಯ ಇದೆ. ಪಿ.ಮರಹಳ್ಳಿ ಗ್ರಾಮದ ಸರ್ವೆ ನಂಬರ್ 390/3 ರಲ್ಲಿ ನನಗೆ 2 ಎಕರೆ 6 ಗುಂಟೆ ಜಮೀನು ಇದೆ. ನನ್ನ ಜಮೀನಿನ ಪಕ್ಕದಲ್ಲಿ ಸಿದ್ದಯ್ಯರವರ ಜಮೀನು ಇದೆ. ನನ್ನ ಜಮೀನಿನಿಂದ 2 ಜಮೀನಿನ ಬಳಿಕ ಪರಶಿವಪ್ಪ ಇವರ ಜಮೀನು ಇದೆ. ಪರಶಿವಪ್ಪ ಇವರ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ಪರಶಿವಪ್ಪ ಜಮೀನಿನಲ್ಲಿ ಮೊದಲು ಹುರುಳಿ ಬೆಳೆಯುತ್ತಿದ್ದರು ಮತ್ತು ಇತ್ತೀಚೆಗೆ ಅದು ಪಾಳು ಬಿದ್ದಿತ್ತು. 2 ನೇ ಆರೋಪಿ ಪ್ರಭುಸ್ವಾಮಿ ಮೃತ ಪರಶಿವಪ್ಪನ ಅಣ್ಣನಿರುತ್ತಾನೆ ಮತ್ತು 1 ನೇ ಆರೋಪಿ 2 ನೇ ಆರೋಪಿಯ ಮಗನಿರುತ್ತಾನೆ. ಆರೋಪಿತರ ಜಮೀನು ಪರಶಿವಪ್ಪನ ಜಮೀನಿನ ಪಕ್ಕದಲ್ಲಿ ಇದೆ. ಈಗ 1 ವರ್ಷ 4–5 ತಿಂಗಳ ಹಿಂದೆ ಒಂದು ದಿನ ಸಂಜೆ 5–6 ಗಂಟೆ ವೇಳೆಯಲ್ಲಿ ನಾನು ನನ್ನ ಜಮೀನಿನಲ್ಲಿ ಇದ್ದಾಗ

ಪ್ರಭುಸ್ವಾಮಿ ಮತ್ತು ಪರಶಿವಪ್ಪನ ಜಮೀನಿನ ಹತ್ತಿರ ಗಲಾಟೆಯಾಗುತ್ತಿತ್ತು ಆಗ ಜನ ಅಲ್ಲಿಗೆ ಓಡಾಡುತ್ತಿದ್ದರು. ಆ ಕಾಲಕ್ಕೆ ನಾನು ಪರಶಿವಪ್ಪನ ಜಮೀನಿನ ಬಳಿ ಹೋಗಿದ್ದೆ. ಆ ಕಾಲಕ್ಕೆ ಪರಶಿವಪ್ಪ ಕೆಳಗಡೆ ಮಲಗಿದ್ದ ಆತನ ತೊಡೆಗೆ ಏಟು ಬಿದ್ದಿತ್ತು. ಆ ಕಾಲಕ್ಕೆ ಪರಶಿವಪ್ಪ ಮಾತನಾಡುತ್ತಿರಲಿಲ್ಲ ಕೈ ಸನ್ನೆ ಮಾಡುತ್ತಿದ್ದ. ಆಗ ಪರಶಿವಪ್ಪನಿಗೆ ನೀರು ಕುಡಿಸಿದ್ದೆ. ಆ ಕಾಲಕ್ಕೆ ಮಹದೇವಮ್ಮ, ಮಹೇಶ, ಪುಟ್ಟಣ್ಣ, ಮುಂತಾದವರು ಹಾಜರಿದ್ದರು. ಆ ಕಾಲಕ್ಕೆ ಪರಶಿವಪ್ಪನಿಗೂ ಪ್ರಭುಸ್ವಾಮಿಗೂ ದಾರಿ ವಿಚಾರಕ್ಕೆ ಗಲಾಟೆ ಆಗಿತ್ತು ಎಂದು ಗೊತ್ತಾಗಿತ್ತು. ಆ ಕಾಲಕ್ಕೆ ಅಲ್ಲಿ ಸೇರಿದ್ದ ಜನರು ಆದೀಶ ಮಚ್ಚಿನಿಂದ ಪರಶಿವಪ್ಪನಿಗೆ ಹೊಡೆದಿದ್ದ ಎಂದು ಹೇಳಿದ್ದರು. ಆ ದಿನ ನಾನು ಆ ಸ್ಥಳಕ್ಕೆ ಹೋದಾಗ ಆರೋಪಿತರು ಅವರ ಜಮೀನಿನ ಕಡೆಗೆ ಇದ್ದರು. ಮಹೇಶ ಮತ್ತು ಮಹದೇವಸ್ವಾಮಿ ಪರಶಿವಪ್ಪನನ್ನು ಓಮ್ನಿ ಕಾರಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಂತರ ಮರುದಿನ ಬೆಳಗ್ಗೆ ಪರಶಿವಪ್ಪ ಮರಣಹೊಂದಿದ್ದಾರೆ ಎಂದು ಗೊತ್ತಾಗಿತ್ತು. ಪೊಲೀಸರ ಮುಂದೆ ನಾನು ಹೇಳಿಕೆ ಕೊಟ್ಟಿಲ್ಲ. ನಿ.ಪಿ–21 ಪೊಟೋದಲ್ಲಿ ಕಾಣುವ ಜಮೀನು ಪರಶಿವಪ್ಪನ ಜಮೀನು ಇದೆ. ನಿ.ಪಿ–8 ಪೊಟೋದಲ್ಲಿ ಕಾಣುವ ಗಾಯಗಳು ಪರಶಿವಪ್ಪನ ದೇಹಕ್ಕೆ ಆಗಿದ್ದ ಗಾಯಗಳು ಇವೆ.

<u>*ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*</u>

<u>*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*</u>

2. ಆ ಘಟನೆಗಿಂತ 15 ದಿನ ಮುಂಚೆ ಪರಶಿವಪ್ಪ ಟ್ರಾಕ್ಟರ್ ನಲ್ಲಿ ತನ್ನ ಜಮೀನಿನಲ್ಲಿ ಉಳುಮೆ ಮಾಡಿಸಿ ಪ್ರಭುಸ್ವಾಮಿ ಜಮೀನಿಗೆ ತಿರುಗಾಡಲು ದಾರಿ ಮಾಡುವ ಸಲುವಾಗಿ

ಚೆನ್ನಾಕ್ಷಿ ಮರಗಳನ್ನು ಕಡಿಸಿ ಇಬ್ಬರಿಗೂ ತಿರುಗಾಡಲು ಜೆ.ಸಿ.ಬಿ ಇಂದ ರೋಡ್ ಮಾಡಿಸಿ ಕೊಡುವುದಾಗಿ ಹೇಳಿದ್ದ ಬಗ್ಗೆ ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ದಿಃ*29.11.2023* ರಂದು ಸಂಜೆ *5.30* ಗಂಟೆಗೆ ಪರಶಿವಪ್ಪ ಮತ್ತು ಅವರ ಹೆಂಡತಿ ಜಮೀನಿನಲ್ಲಿ ಇದ್ದಾಗ ಆರೋಪಿತರು ಇಬ್ಬರು ಅಲ್ಲಿಗೆ ಹೋಗಿ ಪರಶಿವಪ್ಪನಿಗೆ ರಸ್ತೆ ಬಿಡು ಎಂದರೆ ಇವತ್ತು ನಾಳೆ ಎಂದು ನಾಟಕ ಮಾಡುತ್ತೀಯಾ ಬೋಳಿ ಮಗನೆ ಸೂಳೆ ಮಗನೇ ಎಂದು ಬೈದು ಪ್ರಭುಸ್ವಾಮಿ ಮಣ್ಣನ್ನು ಪರಶಿವಪ್ಪನ ಕಣ್ಣಿಗೆ ಎರಚಿ ಇವನನ್ನು ಬಿಡಬೇಡ ಮುಗಿಸಿಬಿಡು ಎಂದು ಹೇಳಿದಾಗ ಆದೀಶ ಮಚ್ಚಿನಿಂದ ಪರಶಿವಪ್ಪನ ಕೈ ಗಳಿಗೆ ಹೊಡೆದಾಗ ಪರಶಿವಪ್ಪ ಕೆಳಗೆ ಬಿದ್ದಿದ್ದ ಮತ್ತು ಆದೀಶ ಪರಶಿವಪ್ಪನ ಕಾಲುಗಳಿಗೆ ಮನಸೋ ಇಚ್ಛೆ ಹೊಡೆದಿದ್ದ ಎಂದರೆ ಗೊತ್ತಿಲ್ಲ. ಆ ಕಾಲಕ್ಕೆ ಮಹದೇವಮ್ಮ ಜಗಳ ಬಿಡಿಸಲು ಹೋದಾಗ ಪ್ರಭುಸ್ವಾಮಿ ಅವರ ಜುಟ್ಟು ಹಿಡಿದು ಎಳೆದಾಡಿ ಕೆಳಗೆ ಬೀಳಿಸಿದ್ದ ಮತ್ತು ಆದೀಶ ಮಹದೇವಮ್ಮನ ತಮ್ಮ ಮಹದೇವಸ್ವಾಮಿಗೆ ಫೋನ್ ಮಾಡಿ ನಿಮ್ಮ ಭಾವನ ತೊಡೆಗಳನ್ನು ತರಿದು ತುಂಡು ಮಾಡಿದ್ದೇನೆ ಚೀಲ ತೆಗೆದುಕೊಂಡು ಬಂದು ತುಂಬಿಕೊಂಡು ಹೋಗು ಎಂದು ಹೇಳಿದ್ದ ಅಷ್ಟರಲ್ಲಿ ಅಕ್ಕಪಕ್ಕದವರು ಸೇರಿವುದನ್ನು ನೋಡಿ ಆರೋಪಿತರು ಅಲ್ಲಿಂದ ಓಡಿ ಹೋಗಿದ್ದರು ಎಂದರೆ ಗೊತ್ತಿಲ್ಲ. ನಾನು ಆರೋಪಿತರು ಹಲ್ಲೆ ಮಾಡಿದ್ದನ್ನು ಕುದ್ದಾಗಿ ನೋಡಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಮೇಲ್ಕಂಡ ವಿಳಾಸದಲ್ಲಿ --------- ಗುರುತಿಸುತ್ತೇನೆ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*30* ಎಂದು ಗುರುತಿಸಿದೆ. ಆರೋಪಿತರು ನಮ್ಮ ಪಕ್ಕದ ಜಮೀನಿನಲ್ಲಿರುವ ಕಾರಣ ನನಗೆ ಅವರ ಪರಿಚಯ ಇದೆ ಎಂದರೆ ನಿಜ. ಆ ಕಾರಣ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ-

*3.* ಆ ದಿನ ನಾನು ಘಟನೆ ಸ್ಥಳಕ್ಕೆ ಹೋದಾಗ ಪರಶಿವಪ್ಪ ಒಬ್ಬರೇ ಬಿದ್ದಿದ್ದರು ಮತ್ತು ಊರಿನವರು ಬಂದು ನೋಡಿಕೊಂಡು ಹೋಗುತ್ತಿದ್ದರು. ನಾನು ಹೋದ ಬಳಿಕ ಮಹದೇವಮ್ಮ ಮತ್ತು ಮಹೇಶ ಅಲ್ಲಿಗೆ ಬಂದಿದ್ದರು ಎಂದರೆ ನಿಜ. ನನ್ನ ಜಮೀನು ಉತ್ತರಕ್ಕೆ ಶಿವಕುಮಾರ ಮತ್ತು ಸಿದ್ದಯ್ಯನ ಜಮೀನು ಇದೆ ಎಂದರೆ ನಿಜ. ಅವರ ಜಮೀನಿನ ಬಳಿಕ ಸ್ವಾಮಿ ಅವರ ಜಮೀನು ಇದೆ ಎಂದರೆ ನಿಜ. ಆ ಕಾಲಕ್ಕೆ ಸಿದ್ದಯ್ಯನವರ ಜಮೀನಿನಲ್ಲಿ ಕಡಲೆಕಾಯಿ ಫಸಲು ಇತ್ತು ಎಂದರೆ ನಿಜ. ಅವರ ಜಮೀನಿನಲ್ಲಿ ಒಕ್ಕಣೆ ಮಾಡುತ್ತಿದ್ದರು ಮತ್ತು *10–15* ಜನ ಇದ್ದರು ಎಂದರೆ ನಿಜ. ಆ ಜಮೀನಿನಲ್ಲಿ ಕೆಲಸ ಮಾಡುವವರು ಕೂಗಿದಾಗ ನನಗೆ ಕೇಳಿಸಿತ್ತು ಎಂದರೆ ನಿಜ. ನಾನು ಅಲ್ಲಿ ಕೆಲಸ ಮಾಡುವವರನ್ನು ಕೇಳಿದಾಗ ಶಿವಕುಮಾರ ಮತ್ತು ಪರಶಿವಪ್ಪನ ನಡುವೆ ಗಲಾಟೆ ಆಗಿತ್ತು ಎಂದು ಹೇಳಿದ್ದರು ಎಂದರೆ ನಿಜ. ನನ್ನ ಜಮೀನು ಮತ್ತು ಪ್ರಭುಸ್ವಾಮಿ ಜಮೀನಿನ ನಡುವೆ ಬೇರೆ ಎರಡು ಜಮೀನುಗಳಿವೆ ಎಂದರೆ ನಿಜ. ಪ್ರಭುಸ್ವಾಮಿ ಇವರು ಬಾಳೆ ಮತ್ತು ತೆಂಗಿನ ಗಿಡಗಳನ್ನು ಬೆಳೆದು ಜೀವನ ಮಾಡುತ್ತಿದ್ದಾರೆ ಎಂದರೆ ನಿಜ. ಊರಿನಿಂದ ಬಂದಾಗ ಮೊದಲಿಗೆ ಪರಶಿವಪ್ಪನ ಜಮೀನು ನಂತರ ಪ್ರಭುಸ್ವಾಮಿ ಜಮೀನು ಇದೆ ಎಂದರೆ ನಿಜ. ಪರಶಿವಪ್ಪನ ಜಮೀನಿನ ದಕ್ಷಿಣಕ್ಕೆ ನೀರು ಹರಿಯುವ ಹಳ್ಳ ಇದೆ ಎಂದರೆ ನಿಜ. ಆ ಹಳ್ಳದಲ್ಲಿ ಜನ ಓಡಾಡಲು ಆಗುವುದಿಲ್ಲ ಎಂದರೆ ನಿಜ. ಪರಶಿವಪ್ಪನ ಜಮೀನಿನಲ್ಲಿ ದಕ್ಷಿಣಕ್ಕೆ ಇರುವ ತೆವರಿನ ಮೂಲಕ ಆರೋಪಿತರು ಮತ್ತು ಬೇರೆಯವರು ಓಡಾಡುತ್ತಾರೆ ಎಂದರೆ ನಿಜ. ಆ ತೆವರಿನ ಮೇಲೆ ಮರಗಳು ಇರಲಿಲ್ಲ ಎಂದರೆ ನಿಜ. ಅಡ್ಡಹಳ್ಳದಲ್ಲಿ ಮರಗಳು ಇದ್ದವು ಎಂದರೆ ನಿಜ. ಪರಶಿವಪ್ಪನ ಜಮೀನಿನಲ್ಲಿ

ಮರಗಳನ್ನು ಯಾವಾಗ ಕತ್ತರಿಸಿದ್ದರು ಎಂದು ಗೊತ್ತಿಲ್ಲ. ನವೆಂಬರ್ ತಿಂಗಳಲ್ಲಿ ಮಳೆ ಇರುವುದಿಲ್ಲ ಎಂದರೆ ಸರಿಯಲ್ಲ. ಮಹೇಶ ಮತ್ತು ಮಹದೇವಸ್ವಾಮಿ ಪರಶಿವಪ್ಪನನ್ನು ಓಮ್ನಿ ಕಾರಿಗೆ ಹಾಕಿಕೊಂಡು ಆಸ್ಪತ್ರೆಗೆ ಹೋಗಿದ್ದರು ನಾನು ಅವರಿಗೆ ಸಹಾಯ ಮಾಡಿದ್ದೆ. ನಾನು ಆ ಸ್ಥಳದಲ್ಲಿ ಅಂದಾಜು ಮುಕ್ಕಾಲು ಗಂಟೆ ಇದ್ದೆ. ಆ ಕಾಲಕ್ಕೆ ಪರಶಿವಪ್ಪ ಮಾತನಾಡುತ್ತಿರಲಿಲ್ಲ ಎಂದರೆ ನಿಜ.

*4.* ಪರಶಿವಪ್ಪ ಗ್ರಾಮದಲ್ಲಿ ಬಿ.ಜೆ.ಪಿ ಯ ರಾಜಕೀಯ ಮುಖಂಡರು ಎಂದರೆ ನಿಜ. ಅವರು ಆಗಾಗ ಕವಲಂದೆ ಪೋಲೀಸ್ ಠಾಣೆಗೆ ಹೋಗುತ್ತಿದ್ದರು ಎಂದರೆ ನಿಜ. ಪರಶಿವಪ್ಪ ಅವರು ಬಡ್ಡಿ ಸಾಲ ಕೊಡುತ್ತಿದ್ದರು ಎಂದರೆ ನಿಜ. ನಾನು ಕಾಂಗ್ರೆಸ್ ಮುಖಂಡ ಎಂದರೆ ನಿಜ. ಪರಶಿವಪ್ಪ ಮರಣಕಿಂತ ಎರಡು ವರ್ಷ ಮೊದಲು ನಮ್ಮ ಗ್ರಾಮದಲ್ಲಿ ಯಾವುದೇ ಹಬ್ಬದ ಆಚರಣೆ ಮಾಡುತ್ತಿರಲಿಲ್ಲ ಎಂದರೆ ನಿಜ. ಪರಶಿವಪ್ಪನೇ ಅದಕ್ಕೆ ಕಾರಣ ಎಂದರೆ ಗೊತ್ತಿಲ್ಲ. ಪರಶಿವಪ್ಪನಿಗೆ ಊರಿನಲ್ಲಿ ಜನ ಹೆದರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಹೋದಾಗ ಪ್ರಭುಸ್ವಾಮಿ ಮತ್ತು ಆದೀಶ ಪರಶಿವಪ್ಪನ ಬಳಿ ಇರಲಿಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಅವರು ಅವರ ಜಮೀನಿನ ಕಡೆಗೆ ಹೊರಟುಹೋಗಿದ್ದರು. ಆರೋಪಿತರು ಬರುವುದು ಹೋಗುವುದನ್ನು ನಾನು ನೋಡಿಲ್ಲ ಎಂದರೆ ನಿಜ. ಪರಶಿವಪ್ಪನ ಜಮೀನಿನಲ್ಲಿ ಆ ದಿನ ಹೆಣ್ಣುಮಕ್ಕಳು ಮಾಡುವ ಯಾವುದೇ ಕೆಲಸ ಇರಲಿಲ್ಲ ಎಂದರೆ ನಿಜ. ಆ ದಿನ ಬೆಳಗ್ಗೆಯಿಂದ ಸಂಜೆವರೆಗೆ ನಾನು ಪರಶಿವಪ್ಪ ಮತ್ತು ಆತನ ಹೆಂಡತಿ ಜಮೀನಿನಲ್ಲಿ ಇದುದ್ದನ್ನು ನೋಡಿರಲಿಲ್ಲ ಎಂದರೆ ನಿಜ. ಪ್ರಭುಸ್ವಾಮಿ ಮತ್ತು ಪರಶಿವಪ್ಪ *20–30* ವರ್ಷಗಳಿಂದ ಅವರವರ

ಜಮೀನಿನನ್ನು ಪ್ರತ್ಯೇಕವಾಗಿ ಉಳುಮೆ ಮಾಡುತ್ತಿದ್ದರು ಎಂದರೆ ನಿಜ. ದಾರಿ ವಿಚಾರಕ್ಕೆ ಜಗಳ ಮಾಡಿದ್ದು ನನ್ನ ಗಮನಕ್ಕೆ ಬಂದಿಲ್ಲ ಎಂದರೆ ನಿಜ.

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*